**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.2324/2025**

**ಸಿ.ಡಬ್ಲ್ಯೂ-02**

**ಪಿ.ಡಬ್ಲ್ಯೂ-02**

| | |
|---|---|
| ಸಾಕ್ಷಿಯ ಹೆಸರು | : ರಮೇಶ ರಾಠೋಡ |
| ತಂದೆ/ಗಂಡನ ಹೆಸರು | : ಖೇತು |
| ವಯಸ್ಸು | : 34 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಜೇಗಜೇವಣಗಿ ಖೇಟನ್ ತಾಂಡಾ |

**ದಿನಾಂಕ:26-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 1 ಮತ್ತು 3 ರವರ ಪರಿಚಯ ಇರುತ್ತದೆ.

ದಿಃ14.08.2024 ರಂದು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಸ್ಥಳ ಪಂಚನಾಮೆಯನ್ನು 10 ರಿಂದ 11 ಗಂಟೆಯವರೆಗೆ ಮಾಡಿ ಮು.ಮಾ.1 ಮತ್ತು 2 ನ್ನು ಜಪ್ತಿಪಡಿಸಿಕೊಂಡು ಪೋಟೋ ತೆಗೆಸಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು, ಹ್ಯಾಸಿಂಗ್ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಮು.ಮಾ.1 ಮತ್ತು 2 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿ.ಪಿ.3 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಆರ್.ಆರ್.ಕೆ.ವಕೀಲರಿಂದಃ**

ಪಂಚನಾಮೆಯನ್ನು ಬರೆದಿರುತ್ತಾರೆ. ಪಂಚನಾಮೆಯನ್ನು ಪೊಲೀಸರು ಬರೆದಿದ್ದು ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಬರೆಯಲು ಯಾರು ಮಾಹಿತಿ ನೀಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸಾಹೇಬರು ಬರೆದಿರುತ್ತಾರೆ ಆದರೆ ನಾವು ಸಹಿ ಮಾಡಿರುತ್ತೇವೆ ಯಾರು ಮಾಹಿತಿ ನೀಡಿರುತ್ತಾರೆ ಎಂದು ನಮಗೆ ಗೊತ್ತಿಲ್ಲವೆಂದು

ನುಡಿಯುತ್ತಾರೆ. ನಿ.ಪಿ.4 ಮತ್ತು 5 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.4 ಮತ್ತು 5 ರಲ್ಲಿ ಬರೆದಿರುವುದನ್ನು ನನಗೆ ಓದಿ ಹೇಳಿಲ್ಲ. ಪಂಚನಾಮೆಯನ್ನು ಒಂದೇ ಬಾರಿ ಮಾಡಿದ್ದು ನನ್ನನ್ನು ಠಾಣೆಗೆ ಕರೆಸಿಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿ.ಸಿ.ನಂ.2324/2025**

**ಸಿ.ಡಬ್ಲ್ಯೂ-01**

**ಪಿ.ಡಬ್ಲ್ಯೂ-01**

| | |
|---|---|
| ಸಾಕ್ಷಿಯ ಹೆಸರು | : ಭೀಮು ಜಾಧವ |
| ತಂದೆ/ಗಂಡನ ಹೆಸರು | : ಬಾಬು |
| ವಯಸ್ಸು | : 25 ವರ್ಷ |
| ಉದ್ಯೋಗ | : ಕೂಲಿ |
| ವಾಸಸ್ಥಳ | : ಜೀಗಜೇವಣಗಿ ಎಲ್.ಟಿ.ತಾಂಡಾ |

**ದಿನಾಂಕ:26-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 2 ಮತ್ತು 3 ರವರ ಪರಿಚಯ ಇರುತ್ತದೆ. ಚಾಸಾ 4 ನನ್ನ ತಂದೆ. ಚಾಸಾ 5 ನನ್ನ ತಾಯಿ. ಚಾಸಾ 6 ನನ್ನ ಚಿಕ್ಕಪ್ಪ. ಚಾಸಾ 7 ನನ್ನ ದೊಡ್ಡಪ್ಪ.

ದಿಃ11.08.2024 ರಂದು ಬೆಳಿಗ್ಗೆ 9.30 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ಆರೋಪಿತರು ನಮ್ಮ ಮನೆಯ ಮುಂದೆ ಊರಿನ ಹಿರಿಯರಿಗೆ ಕರೆಸಿರುತ್ತಾರೆ. ನಾವು ನಮ್ಮ ಮನೆಯ ಹತ್ತಿರ ಶೆಡ್ಡು ಹಾಕುವ ಸಲುವಾಗಿ ಸಿಮೆಂಟ್ ಕಂಬಗಳನ್ನು ನೆಡುತ್ತಿದ್ದಾಗ ಆರೋಪಿತರು ಬಂದು ಈ ಸುಳೆಮಕ್ಕಳಿಗೆ ಬಹಳ ಸೊಕ್ಕು ಇದೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನಮ್ಮ ತಿಪ್ಪೆಯ ಮುಂದೆ ಯಾಕೆ ಕಂಬ ನೆಡುತ್ತಿದ್ದೀರಿ ಎಂದು 1 ನೇ ಆರೋಪಿಯು ಚಾಸಾ 4 ರವರಿಗೆ ಬಡಿಗೆಯಿಂದ ಬಲ ಕೀವಿಗೆ ಹೊಡೆದಿರುತ್ತಾರೆ. 2 ನೇ ಆರೋಪಿಯು ಚಾಸಾ 4 ರವರಿಗೆ ಕಲ್ಲಿನಿಂದ ಬೆನ್ನಿಗೆ ಹೊಡೆದಿರುತ್ತಾನೆ. ಸದರಿ ಹಲ್ಲೆಯಿಂದ ಚಾಸಾ 4 ರವರಿಗೆ ರಕ್ತಗಾಯ ಆಗಿರುತ್ತದೆ. ಆರೋಪಿತರು ಎಲ್ಲರೂ ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ನಾನು ಚಡಚಣ ಪೊಲೀಸ್ ಠಾಣೆಗೆ ಹೋಗಿ ಅಲ್ಲಿಂದ ಸರ್ಕಾರಿ ಆಸ್ಪತ್ರೆಗೆ ಚಾಸಾ 4 ರವರನ್ನು ಹೋಗಿರುತ್ತೇನೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ BLDE ಆಸ್ಪತ್ರೆಗೆ ಚಾಸಾ 4 ರವರನ್ನು

ಕರೆದುಕೊಂಡು ಹೋಗಿರುತ್ತೇನೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ದಿಃ14.08.2024 ರಂದು 10 ರಿಂದ 11 ಗಂಟೆಯವರೆಗೆ ನಾನು ತೋರಿಸಿದಂತೆ ಘಟನಾ ಸ್ಥಳದ ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಕಲ್ಲು ಮತ್ತು ಬಡಿಗೆಯನ್ನು ಜಪ್ತಿಪಡಿಸಿಕೊಂಡಿರುತ್ತಾರೆ. ಅದೇ ವೇಳೆಗೆ ಪೋಟೋ ತೆಗೆದು ವಿಡಿಯೋ ಮಾಡಿರುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು, ಸಾಕ್ಷಿಯು ಪ್ರ.ವ.ವ.ವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು, ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬಡಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು, ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ:**

3 ರಿಂದ 6 ನೇ ಆರೋಪಿತರು ಚಾಸಾ 4 ರವರಿಗೆ ಕೈಯಿಂದ ಹೊಡೆಯುವುದು, ಕಾಲಿನಿಂದ ಒದೆಯುವುದು ಮಾಡಿ ಎಳೆದಾಡಿರುತ್ತಾರೆ ಎಂದರೆ ಸರಿ. ಸದರಿ ಜಗಳವನ್ನು ಚಾಸಾ 3 ಮತ್ತು 6 ರವರು ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಹೋಗುವಾಗ ಇನ್ನೊಮ್ಮೆ ಸಿಕ್ಕರೆ ಜೀವಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಆರ್.ಆರ್.ಕೆ.ವಕೀಲರಿಂದಃ**

2010 ನೇ ಇಸವಿಯಲ್ಲಿ ನಮ್ಮ ಗ್ರಾಮದಲ್ಲಿ ಗ್ರಾಮ ಪಂಚಾಯತಿ ಚುನಾವಣೆ ನಡೆದಿತ್ತು ಎಂದರೆ ಸರಿ. ನಮ್ಮ ತಾಂಡಾ ಜೇಗಜೀವಣಗಿ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ಆ ಸಮಯದಲ್ಲಿ 3 ನೇ ಆರೋಪಿಯು ಚುನಾವಣೆಗೆ ನಿಂತಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ನೇ ಆರೋಪಿಯು ಚುನಾವಣೆಗೆ ನಿಂತಿದ್ದರು ನನಗೆ ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ



ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ತುಕಾರಾಮ ಜಾಧವ ಇವರು ಚುನಾವಣೆಯಲ್ಲಿ ನಿಂತಿದ್ದರು ಎಂದರೆ ನನಗೆ ಗೊತ್ತಿಲ್ಲ. ತುಕಾರಾಮ ಜಾಧವ ಇವರು ನಮ್ಮ ಅಜ್ಜ ಎಂದರೆ ಸರಿ. ಚುನಾವಣಾ ಸಮಯದಿಂದ ನಮಗೂ ಮತ್ತು ಆರೋಪಿತರಿಗೂ ಮನಸಾ ಮನಸಾ ಸರಿ ಇಲ್ಲ ಎಂದರೆ ಸರಿಯಲ್ಲ. ಸದರಿ ಅಂಶದ ಬಗ್ಗೆ ನನಗೆ ಗೊತ್ತಿದ್ದರು ಇಲ್ಲವೆಂದು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಿಪ್ಪೆ ಹಾಕಿದ್ದ ಜಾಗ ಗ್ರಾಮ ಪಂಚಾಯತಿ ಜಾಗ ಎಂದರೆ ಸರಿ. ನಾನು ದಿಃ13.08.2014 ರಂದು ದೂರನ್ನು ನೀಡಿರುತ್ತೇನೆ. ನಿ.ಪಿ.1 ನ್ನು ನಾನೇ ಬರೆದಿರುತ್ತೇನೆ. ನಿ.ಪಿ.1 ನ್ನು ನಾನೇ ನನ್ನ ತಿಳುವಳಿಕೆಯಿಂದ ಬರೆದಿದ್ದು ಅದಕ್ಕೆ ಯಾರು ಮಾಹಿತಿ ನೀಡಿಲ್ಲ. ನಾನು ನಿ.ಪಿ.1 ನ್ನು 2 ದಿನ ತಡಮಾಡಿ ನೀಡಿರುತ್ತೇನೆ ಎಂದರೆ ಸರಿ. ನಮ್ಮ ಗ್ರಾಮಕ್ಕೂ ಮತ್ತು ಪೊಲೀಸ್ ಠಾಣೆಗೂ 18 KM ಅಂತರ ಇರುತ್ತದೆ. ಆ ವೇಳೆಯಲ್ಲಿ ಪಿರ್ಯಾದಿಯನ್ನು ನೀಡಬಹುದಿತ್ತು ಎಂದರೆ ಸಾಕ್ಷಿಯು 2 ದಿನ ತಡಮಾಡಿ ಆರೋಪಿತರು ಏನು ಹೇಳುತ್ತಾರೆ ಎಂದು ತಿಳಿದುಕೊಳ್ಳೋಣ ಎಂದು ನೀಡಿರಲಿಲ್ಲವೆಂದು ನುಡಿಯುತ್ತಾರೆ. ಆ ದಿನ ಘಟನೆ ನಡೆಯದೇ ಇದ್ದರು ಸಹ ನಾನು ಸುಳ್ಳು ಅಂಶಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಮುಂದೆ ಸಿಮೆಂಟ್ ಕಂಬವನ್ನು ನೆಡುತ್ತಿದ್ದಾಗ ಆರೋಪಿತರು ಬಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ರವರಿಗೆ ಬಡಿಗೆಯಿಂದ ಬಲಗಿನ ಕಿವಿಗೆ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ಚಾಸಾ 4 ರವರ ಬೆನ್ನಿಗೆ ಕಲ್ಲಿನಿಂದ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳವಾದ ದಿನ ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಪೊಲೀಸ್ ಠಾಣೆಗೆ ಹೋದಾಗ ಪೊಲೀಸ್ ಠಾಣೆಯವರು ಮೊದಲು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ತಿಳಿಸಿದ ಮೇರೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆ ದಿನ ನಮಗೆ ಹೊಡೆಬಡೆ ಮಾಡದೇ ಇದ್ದ ಕಾರಣ ಪೊಲೀಸರು ದೂರು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾವೇ ಗಾಯ ಮಾಡಿಕೊಂಡು ಹೋಗಿ ಆಸ್ಪತ್ರೆಗೆ ದಾಖಲಾಗಿರುತ್ತೇವೆ ಎಂದರೆ ಸರಿಯಲ್ಲ. ನಂತರ ಆಸ್ಪತ್ರೆಯಲ್ಲಿ ದಾಖಲಾಗಿ 2 ದಿನದ ನಂತರ ಬಂದು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 4 ರವರಿಗೆ ಹೊಡೆಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರಂತೆ ಬೇರೆ ಕಡೆ



ಸಿಗುತ್ತವೆ ಎಂದರೆ ಸರಿ. ಆರೋಪಿತರು ನಮ್ಮ ಮನೆಯ ಮುಂದೆ ಹಾಕಿರುವ ತಿಪ್ಪೆಯನ್ನು ಎತ್ತಿ ಹಾಕಿಸಬೇಕೆನ್ನುವ ದುರುದ್ದೇಶದಿಂದ ಮತ್ತು ಚುನಾವಣಾ ವೈಶಮ್ಯದಿಂದ ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**